# ಬ್ರಹ್ಮಾಂಡದೊಳಗೆ ಅರಸಿ ನೋಡಲು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Note:** Lyrics in both the above references are same and the singer has followed these lyrics.

ರಾಗ: ಪೂರ್ವಿ ಕಲ್ಯಾಣಿ. ತಾಳ: ಛಾಪು

ಬ್ರಹ್ಮಾಂಡದೊಳಗೆ ಅರಸಿ ನೋಡಲು, ನಮ್ಮೂರೇ ವಾಸಿ || ಪ ||
ರಮ್ಮೆಯರಸನು ಸರ್ವದಾ ವಾಸಿಪ, ಸುಮ್ಮಾನದಿ ತಾನು || ಅಪ ||

ಜನನ ಮರಣವಿಲ್ಲ, ಅಲ್ಲಿ, ಉಣುವ ದುಃಖವಿಲ್ಲ
ಅನುಜ ತನುಜರು ಅಲ್ಲಿಲ್ಲ, ಅನುಮಾನದ ಸೊಲ್ಲೇ ಇಲ್ಲ || 1 ||

ನಿದ್ರೆಯು ಅಲ್ಲಿಲ್ಲ, ರೋಗೋಪದ್ರಗಳಲ್ಲಿಲ್ಲ
ಕ್ಷುದ್ರ ಜನಂಗಳು ಅಲ್ಲಿಲ್ಲ, ಸಮುದ್ರ ಶಯನ ಬಲ್ಲ ಎಲ್ಲ || 2 ||

ಸಾಧು ಜನರ ಕೂಡೆ, ಮೋಕ್ಷಕೆ ಸಾಧನೆಗಳ ಮಾಡೆ
ಮಾಧವ ಪುರಂದರ ವಿಠ್ಠಲ ರಾಯನು, ಆದರಿಸುವನಲ್ಲೆ ಬಲ್ಲೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ನಮ್ಮೂರು** – ಪ್ರತಿಬಿಂಬನಾದ ಜೀವನ ಸ್ವಸ್ಥಾನ; ಹೃದಯ ಕಮಲ; ಬಿಂಬನ ಸಾನ್ನಿಧ್ಯದಲ್ಲಿ. ಅಲ್ಲಿಯೇ ರಮೆಯ ಅರಸನಾದ ಹರಿಯು ನಿರ್ಲಿಪ್ತನಾಗಿ ಕಾರುಣ್ಯದಿಂದ (ಸುಮ್ಮಾನದಿ) ನೆಲೆಸಿರುವನು. ಜೀವೇಶರಿಗೆ ನಿತ್ಯ ವಾಸವು ಏಕತ್ರವೆಂದು ಸಿದ್ಧಾಂತ. ಮುಕ್ತಿಯಲ್ಲಿ ವೈಕುಂಠ ಜೀವದ ನೆಲೆಮನೆ.

**ಸಾಧು ಜನರ ಕೂಡೆ** – ಸತ್ಸಂಗ ಮಾಡಲು.

**ಮೋಕ್ಷಕೆ ಸಾಧನೆ** – ಜ್ಞಾನ, ಭಕ್ತಿ, ವೈರಾಗ್ಯ; ಶ್ರವಣ, ಮನನ, ನಿದಿದ್ಯಾಸನ.

**Classification:** Keerthane
**Ankita:** purandara vittala
**Location:** NA
**Category:** Bimba Roopa
**Sub-Category:** brahmanda, ooru, arasa, Lakshmi, huttu, marana, oota, dukha, anumana, nidde, roga, jana, Samudra, sadhu, moksha, Madhava, jiva, bimba, vaikunta,
**Pravachana:** NA
**Explanation:** NA